ಓ.ಎಸ್. ನಂ.*200/2013*

ಡಿ.ಡಬ್ಲ್ಯು-*1.*

ಸಾಕ್ಷಿಯನ್ನು ಇಂದು ದಿನಾಂಕಃ *24.11.2022* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಎಸ್.ಎ.ಪಿ. ವಕೀಲರಿಂದ**

ನಮ್ಮ ತಂದೆಗೆ ನಾವು ಒಟ್ಟು ಮೂರು ಜನ ಮಕ್ಕಳು. ನಾನು, ವಾದಿಯರು ಎಂದರೆ ಸರಿ. ನನಗೆ ನಾಲ್ಕು ಜನ ಮಕ್ಕಳು ಇರುತ್ತಾರೆ ಅದರಲ್ಲಿ ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನಮ್ಮ ಮನೆತನಕ್ಕೆ ಒಕ್ಕಲುತನವನ್ನು ಬಿಟ್ಟು ಬೇರೆ ಯಾವುದೂ ಆದಾಯ ಇಲ್ಲ ಎಂದರೆ ಸರಿ ಅಲ್ಲ. ನನ್ನ ಮಗ ಬಾಳು ಅನ್ನುವವನು ಚಾಲಕನಿರುತ್ತಾನೆ ಅವನದು ಸ್ವಂತ ಗಾಡಿ ಇರುತ್ತದೆ. ಚಾಲಕ ಉದ್ಯೋಗ ನಡೆಸುತ್ತಾನೆ. ನನ್ನ ಮಗ ಬಾಳುವಿಗೆ 24 ವರ್ಷ ವಯಸ್ಸು

ಇರುತ್ತದೆ. ಚಾಲಕನಿಗೆ ಎಷ್ಟು ಪಗಾರ ಕೊಡುತ್ತಾರೆ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಸುಮಾರು 5-6 ವರ್ಷದಿಂದ ಕೆಲಸ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ನನಗೆ ಇನ್ನೊಬ್ಬ ಮಗ ಇರುತ್ತಾನೆ, ಅವನ ಹೆಸರು ಸತೇಶ, ಅವನು ಒಕ್ಕಲುತನ ಮಾಡುತ್ತಾನೆ. ನಾನು ಒಕ್ಕಲುತನವನ್ನು ಹೊರತುಪಡಿಸಿ ಬೇರೆ ಯಾವ ಕೆಲಸವನ್ನು ಮಾಡುವುದಿಲ್ಲ.

ನಾನು, ವಾದಿ ನಂ.೧ ಸೇರಿ ನನ್ನ ಹೆಸರಿನಲ್ಲಿ ಸ.ನಂ. 3/1 ಕ್ಷೇತ್ರ 4 ಎ-06 ಗುಂಟೆ ಜಮೀನನ್ನು ನನ್ನ ಹೆಸರಿನಲ್ಲಿ ಖರೀದಿ ಹಿಡಿದಿರುತ್ತೇವೆ ಎಂಧರೆ ಸರಿ ಅಲ್ಲ, ನನ್ನ ತಾಯಿಯವರು ಖರೀದಿ ಹಿಡಿದಿರುತ್ತಾರೆ ಅದು ನನ್ನ ಹೆಸರಿನಲ್ಲಿ ಹಿಡಿದಿರುತ್ತಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಸ.ನಂ. 3/1 ಕ್ಷೇತ್ರ 4 ಎ-06 ಗುಂಟೆ ಜಮೀನನ್ನು ಖರೀದಿ ಹಿಡಿದು ಸುಮಾರು 25 ವರ್ಷಗಳಾಗಿರುತ್ತದೆ. ದಾವಾ ಆಸ್ತಿ ಸ.ನಂ. 5/3 ಕ್ಷೇತ್ರ 5 ಎ-06 ಗುಂಟೆ ಇನ್ನೊಂದು ಸ.ನಂ. 7/4 ಕ್ಷೇತ್ರ 3 ಎ-08 ಗುಂಟೆ ಇದು ನಮ್ಮ ಹಿರಿಯರ ಆಸ್ತಿ ಇರುತ್ತದೆ ಎಂದರೆ ಸರಿ, ಹಿರಿಯರು ತೀರಿಕೊಂಡ ನಂತರ ವಾದಿ ನಂ.೧ ರವರ ಹೆಸರಿನಲ್ಲಿ ಮಾಡಿರುತ್ತಾರೆ ಎಂಧರೆ ಸರಿ. 1982 ರಲ್ಲಿ ವಾದಿಯು ತನ್ನ ಕುಟುಂಬ ಸಮೇತ ಉಮರ್ಗಾಕ್ಕೆ ಹೋಗಿ ವಾಸ ಮಾಡುತ್ತಿದ್ದಾರೆ ಎಂಧರೆ ಸರಿ ಅಲ್ಲ, ಸಾಕ್ಷಿ ಮುಂದುವರೆದ 1974 ರಲ್ಲೇ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಉಮರ್ಗಾಕ್ಕೆ ಹೋದ ನಂತರ ವಾದಿಯು ತನ್ನ ಹೆಂಡತಿ ಹೆಸರಿನಲ್ಲಿ ಮತ್ತು ಅವರ ಜೊತೆ ಇನ್ನೊಬ್ಬ ಪಾರ್ಟನರ್ ಸೇರಿ ಸರಾಯಿ ಅಂಗಡಿ ಪರವಾನಿಗೆ ಪಡೆದುಕೊಂಡು ಸರಾಯಿ ಅಂಗಡಿಯ ಉದ್ಯೋಗ ಪ್ರಾರಂಭಿಸಿದ ಎಂದರೆ ಸಾಕ್ಷಿಯು ಮೊದಲು ನನ್ನ ಅಣ್ಣನ ಹೆಸರಿನಲ್ಲಿ ಪರವಾನಿಗೆ ಇತ್ತು ಇನ್ನೊಂದು ಪರವಾನಿಗೆಯನ್ನು ಕೊಡುವುದಿಲ್ಲ ಎಂಬ ಕಾರಣದಿಂದ ನಾನೇ ಹೋಗಿ ಇನ್ನೊಂದು ಪರವಾನಿಗೆಯನ್ನು ನನ್ನ ಅತ್ತಿಗೆಯ ಹೆಸರಿನಲ್ಲಿ ತೆಗೆದುಕೊಟ್ಟಿರುತ್ತೇನೆ. ನನ್ನ ಅತ್ತಿಗೆಯ ಹೆಸರು ಮಂಗಲಾಬಾಯಿ ಇರುತ್ತದೆ ಎಂಧರೆ ಸರಿ. ನನ್ನ ಅತ್ತಿಗೆಯ ತವರು ಮನೆ ಹೋಳಿ ಗ್ರಾಮ, ತಾ. ಲೋಹಾರಾ ಇರುತ್ತದೆ ಎಂದರೆ ಸರಿ. ಮಂಗಲಾಬಾಯಿಯ ತಂದೆಯ ಹೆಸರು ತುಕಾರಾಮ ಇರುತ್ತದೆ ಎಂಧರೆ ಸರಿ. ನನ್ನ ಅತ್ತಿಗೆಗೆ ದಯಾನಂದ ಎನ್ನುವ ಸಹೋದರ ಇರುತ್ತಾನೆ ಎಂದರೆ ಸರಿ. ದಯಾನಂದನ ಮಗ ರಾಮ ಇರುತ್ತಾನೆ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಉಮರ್ಗಾ ತಾಲೂಕಿನಲ್ಲಿ ವಾದಿ ನಂ.೧ ಮತ್ತು ಅವನ ಹೆಂಡತಿ ಜಮೀನುಗಳನ್ನು ಖರೀದಿ ಹಿಡಿದರು ಎಂದು ಹೇಳುತ್ತೀರಲ್ಲಾ, ಅವನ್ನು ಯಾವ ವರ್ಷ, ಯಾರ ಹೆಸರಿನಲ್ಲಿ ಖರೀದಿ ಹಿಡಿದರು ಎಂದು ನಿಮಗೆ ಗೊತ್ತಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಎಷ್ಟು ಹಣವನ್ನು ಕೊಟ್ಟು ಖರೀದಿ ಹಿಡಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅತ್ತಿಗೆಯ ಸಹೋದರ ಅವರ ತಂದೆ ತೀರಿಕೊಳ್ಳುವ ಮೊದಲು ತೀರಿಕೊಂಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಭೂಕಂಪದಲ್ಲಿ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಭೂಕಂಪವು 1993 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ತುಕಾರಾಮ ಅವರು 1986 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದೇನು ನೆನಪಿಲ್ಲ ಎಂದು ನುಡಿಯುತ್ತಾರೆ. ದಯಾನಂದನ ಮಗ ರಾಮ ಎನ್ನುವವನು ಇದ್ದನು ಅವನೇನಾದರೂ ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಉಮರ್ಗಾ ಗ್ರಾಮದಲ್ಲಿ ಹಿಡಿದಿರುವು ಜಮೀನಿಗೆ ಎಂದಾದರೂ ಹೋಗಿದ್ದೀರಾ ಎಂಧರೆ ಸಾಕ್ಷಿಯು ಹೋಗಿ ನಾನೇ ಗಳೇ ಹೊಡೆದು ನಮ್ಮ ಎರಡು ಎತ್ತು ಮತ್ತು ನಮ್ಮ ಬೀಗರ ಎರಡು ಎತ್ತುಗಳನ್ನು ತೆಗೆದುಕೊಂಡು ಗಳೇ ಹೊಡೆದಿರುತ್ತೇನೆ ಎಂದು ನುಡಿಯುತ್ತಾರೆ. ಸುಮಾರು 20 ವರ್ಷಗಳ ಹಿಂದೆ ಹೋಗಿ ಬಿತ್ತು ಬೆಳೆ ಮಾಡಿ ಬಂದಿರುತ್ತೇನೆ, ಸಾಕ್ಷಿ ಮುಂದುವರೆದು ಇತ್ತಿತ್ತಲಾಗಿ ನನ್ನ ಸಹೋದರ ಸದರಿ ಜಮೀನಿನ ಜವಾಬ್ದಾರಿ ತೆಗೆದುಕೊಂಡು ಬಿತ್ತು ಬೆಳೆ ಮಾಡುತ್ತಿದ್ದನು ಎಂದು ನುಡಿಯುತ್ತಾರೆ. ನಿನಗೆ ಸದರಿ ಜಮೀನುಗಳು ಯಾವ ಊರಿನಲ್ಲಿ ಬರುತ್ತವೆ, ಮತ್ತು ಅದರ ಚೆಕಬಂದಿ ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿಯು ಕುಣಜಿ ಗ್ರಾಮದಲ್ಲಿ ಬರುತ್ತವೆ ಆದರೆ ಅದರ ಚೆಕಬಂದಿ ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಯಾರ ಹೆಸರಿನಲ್ಲಿ ಇದ್ದಾವೆ ಎಂದು ಏನಾದರೂ ಗೊತ್ತಾ ಎಂದರೆ ಸಾಕ್ಷಿಯು ನನ್ನ ಸಹೋದರ (ವಾದಿ ನಂ.೧) ಮತ್ತು ನನ್ನ ಅತ್ತಿಗೆಯ ಹೆಸರಿನಲ್ಲಿ ಇರುತ್ತವೆ ಅವುಗಳನ್ನು ನಮ್ಮ ತಾಯಿಯೇ ಅವರ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾಳೆ ಎಂದು ನುಡಿಯುತ್ತಾರೆ. ಹೋಳಿ ಗ್ರಾಮದಲ್ಲಿ ವಾದಿ ನಂ.೧ ರವರ ಹೆಂಡತಿಯ ತಂದೆಯ ಹೆಸರಿನಲ್ಲಿ ಎರಡು ಜಮೀನುಗಳು ಇದ್ದವು ಎಂಧರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಹೋಳಿ ಗ್ರಾಮದಲ್ಲಿರುವ ಜಮೀನನ್ನು ನನ್ನ ಅತ್ತಿಗೆಯ ತಂದೆ ತುಕಾರಾಮರವರು ದಾಜೀಬಾ ಯಶ್ವಂತ ನೇಲವಾಡೆ, ಸುರೇಶ ತುಕಾರಾಮ ಪವಾರ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು

ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ತುಕಾರಾಮರವರು ಉಮರ್ಗಾದಲ್ಲಿರುವ ಜಮೀನುಗಳನ್ನು ಅವರ ಮೊಮ್ಮಗ ಚಿಕ್ಕವನಿದ್ದ ಕಾರಣ ವಾದಿ ನಂ.೧ ಮತ್ತು ವಾದಿ ನಂ.೧ ರವರ ಹೆಂಡತಿಯ ಹೆಸರಿನಲ್ಲಿ ಖರೀದಿ ಹಿಡಿದರು ಎಂದರೆ ಸರಿ ಅಲ್ಲ. 2002-03 ರಲ್ಲಿ ವಾದಿ ನಂ.೧ ಮತ್ತು ಅವನ ಹೆಂಡತಿ, ಭೀಮಾಶಂಕರ ಸೇರಿ ರಾಮ ತಂದೆ ದಯಾನಂದ ಪ್ರಾಪ್ತ ವಯಸ್ಸಾದ ನಂತರ ಬಿಟ್ಟು ಕೊಟ್ಟಿರುತ್ತಾರೆ ಎಂಥರೆ ಸರಿ ಅಲ್ಲ. ಹೋಳಿ ಗ್ರಾಮದಲ್ಲಿರುವ ಜಮೀನುಗಳು 2002-03 ರಿಂದ ಹಿಡಿದು ಇಲ್ಲಿಯವರೆಗೂ ರಾಮ ತಂದೆ ದಯಾನಂದ ಇವರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ಪ್ರಮಾಣ ಪತ್ರದಲ್ಲಿ ಮಹಾರಾಷ್ಟ್ರದಲ್ಲಿರುವ ಜಮೀನುಗಳನ್ನು ಖರೀದಿ ಹಿಡಿಯಲು ನಾನು ಹಣವನ್ನು ಕೊಟ್ಟಿರುತ್ತೇನೆ ಎಂದು ಏನಾದರೂ ಬರೆಸಿದ್ದೀಯಾ ಎಂಥರೆ ಸಾಕ್ಷಿಯು ನಾನು ಬರೆಸಿರುವುದಿಲ್ಲ, ನನ್ನ ತಾಯಿಯವರೇ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕಾಗದ ಪತ್ರಗಳನ್ನು ನಾನೇ ತೆಗೆಸಿರುತ್ತೇನೆ. ಕಾಗದ ಪತ್ರಗಳನ್ನು ಹಾಜರುಪಡಿಸುವ ಸಮಯದಲ್ಲಿ ಈಗ ಚಾಲ್ತಿಯಲ್ಲಿರುವ ಕಾಗದ ಪತ್ರಗಳನ್ನು ತೆಗೆಯಬೇಕು ಮತ್ತು ಹಾಜರುಪಡಿಸಬೇಕು ಎಂದು ಅನಿಸಿತಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಚಾಲ್ತಿಯಲ್ಲಿರುವ ಪಹಣಿಗಳು ಮತ್ತು ಹಿಂದಿನ ಪಹಣಿಗಳೆಲ್ಲವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

**[** ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು **]**

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.